**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ ಉತ್ತರ ಕನ್ನಡ : ಕಾರವಾರ**

**ಸ್ಪೆಷಲ್ ಕೇಸ್ ನಂ. 8/2014**

**ದೋ.ಸಾ. :68 ಫ್ರಾ.ಸಾ. : 40**

ಸಾಕ್ಷಿಯ ಹೆಸರು : ಅಬ್ದುಲ್ ಅಮಹಮದ್ ಶೇಖ್
ತಂದೆಯ ಹೆಸರು : ಅಮಹಮದ್ ಶೇಖ್
ವಯಸ್ಸು : 54 ವರ್ಷ
ಉದ್ಯೋಗ : ಉಪ ಅರಣ್ಯ ಸಂರಕ್ಷಣಾಧಿಕಾರಿ.
ವಾಸ : ಶಿರಸಿ.

**ದಿನಾಂಕಃ 02-08-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಿಶೇಷ ಸರಕಾರಿ ಅಭಿಯೋಜಕರಿಂದ**

1. ನಾನು ಹಿಂದೆ ದಿನಾಂಕ 18.11.2010 ರಿಂದ 26.06.2014 ರವರೆಗೆ ಅಂಕೋಲಾ ವಲಯ ಅರಣ್ಯ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ 01.03.2012 ರಂದು ಕಾರವಾರ ಲೋಕಾಯುಕ್ತ ಠಾಣೆಯ ಆರಕ್ಷಕ ನಿರೀಕ್ಷಕರು ಪತ್ರ ಬರೆದು ಆರೋಪಿ ನರೇಂದ್ರ ಜಿ ಹಿತ್ತಲಮಕ್ಕಿ ರವರ ದಿನಾಂಕ 01.07.1994 ರಿಂದ ಜುಲೈ 2000 ರವರಗೆಗೆ ಅಂಕೋಲಾ ವಲಯ ಅರಣ್ಯ ಅಧಿಕಾರಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಅವರು ಪಡೆದ ವೇತನದ ವಿವರದ ಬಾರವಾರ್ಡ ಉದ್ಧೃತವನ್ನು ಪೂರೈಸುವಂತೆ ಕೋರಿದ್ದರು. ಈಗ ಅದನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಕೋರಿಕೆ ಪತ್ರವನ್ನು ನಿಪಿ-237 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-237(ಎ) ಎಂದು ಗುರುತಿಸಲಾಯಿತು. ನಂತರ ನಾನು ಕಚೇರಿಯ ಕಡತ ಪರಿಶೀಲಿಸಿ ಅವರು ಕೋರಿದ ಮಾಹಿತಿಯನ್ನು ಲಿಖಿತವಾಗಿ ಕವಚ ಪತ್ರದೊಂದಿಗೆ ಸಲ್ಲಿಸಿರುತ್ತೇನೆ. ಈಗ ನಾನು ಕವಚ ಪತ್ರ ಮತ್ತು ಅದೊಂದಿಗೆ ಲಗತ್ತೀಸಿದ ಬಾರವಾರ್ಡ ಉದ್ಧೃತವನ್ನು ನೋಡಿರುತ್ತೇನೆ. ಅದರಲ್ಲಿ ನನ್ನ ರುಜು ಇದೆ. ಸದರಿ ಕವಚ ಪತ್ರವನ್ನು ನಿಪಿ-238 ಎಂದು ಗುರುತಿಸಲಾಯಿತು. ಸಾಕ್ಷಿಯ ರುಜುವನ್ನು ನಿಪಿ-238(ಎ) ಎಂದು ಗುರುತಿಸಲಾಯಿತು. ಅದರೊಂದಿಗೆ ಇರುವ ಬಾರವಾರ್ಡ ಉದ್ಧೃತ/ವೇತನ ವಿವರ

ಉದ್ಧೃತವನ್ನು ನಿಪಿ–238/1 ಎಂದು ಗುರುತಿಸಲಾಯಿತು. ಅದು 3 ಹಾಳೆ ಇದೆ. ಅದರಲ್ಲಿ ಸಾಕ್ಷಿಯ ರುಜುವನ್ನು ಕೊನೆಯ ಪುಟದಲ್ಲಿ ನಿಪಿ–238/1(ಎ) ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ ಎಸ್ ಎನ್ ರವರಿಂದಃ</u>**

ಪಾಟಿ ಸವಾಲು ಏನೂ ಇಲ್ಲ ಎಂದು ಹೇಳಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.